ಸಭೆಯಂ ಮುಂದಿಡಲಾದ ಕಾಗದ ಪತ್ರಗಳು

೧೨-೦೦ ಮಧ್ಯಾಹ್ನ

ಅಧ್ಯಕ್ಷರು.—ಈಗ ಸಭೆಯಂ ಮುಂದೆ ಇಡಲಾಗುವ ಕಾಗದ ಪತ್ರಗಳು. ಮಾನ್ಯ ಸಚಿವರಾದ ಶ್ರೀ ಬಿ. ರಾಚಯ್ಯನವರು ತಮ್ಮ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಸಭೆಯ ಮುಂದಿಡುವುದು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ದಿನಾಂಕ ೧೯೫೨ನೇ ಇಸವಿಯ ತನಿಖಾ ಆಯೋಗಗಳ ಕಾಯಿದೆಯ ೩(೪)ನೇ ಕಲಮಿನ ಮೇರೆಗೆ, ದಿನಾಂಕ ೨೦ನೇ ಮಾರ್ಚ್ ೧೯೬೬ರಂದು ಚಂದ್ರಗುತ್ತಿಯಲ್ಲಿ ನಡೆದ ಬೆತ್ತಲೆ ಸೇವೆ ಪ್ರಕರಣದ ಬಗ್ಗೆ ಶ್ರೀ ಚನ್ನವೀರಪ್ಪ ವಿಚಾರಣಾ ಆಯೋಗದ ವರದಿಯನ್ನು ಹಾಗೂ ಅದರ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ಜ್ಞಾಪನ ಪತ್ರದೊಂದಿಗೆ ಸಭೆಯ ಮುಂದಿಡುತ್ತೇನೆ, ಮತ್ತು ರೆಕ್ಟಿಫೈಡ್ ಸ್ಪಿರಿಟನ್ನು ರಫ್ತು ಮಾಡಿರುವ ಬಗ್ಗೆ ಶ್ರೀ ಬೋಪಣ್ಣ ತನಿಖಾ ಆಯೋಗದ ವರದಿಯನ್ನು ಹಾಗೂ ಅದರ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ಜ್ಞಾಪನಾ ಪತ್ರವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ವರದಿಗಳನ್ನು ಒಪ್ಪಿಸುವುದು

ಶ್ರೀ ಕೆ. ಅಮರನಾಥ ಶೆಟ್ಟಿ.—ಮಾನ್ಯ ಅಧ್ಯಕ್ಷರೇ ಸಭೆಯ ಮುಂದಿಟ್ಟ ಕಾಗದ ಪತ್ರಗಳ ಸಮಿತಿಯ ಮೊದಲನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಗೆ ಒಪ್ಪಿಸಲಾಗಿದೆ,

ಶ್ರೀ ಕೆ.ಎಚ್.ಪಾಟೀಲ್.—ಮಾನ್ಯ ಅಧ್ಯಕ್ಷರೇ ನಾನು ಶುಕ್ರವಾರದಂದು ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೆ. ಅದನ್ನು ಸೋಮವಾರದಂದು ತೆಗೆದುಕೊಳ್ಳುವುದಾಗಿ ಹೇಳಿದ್ದಿರಿ.

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಆಯಿತು.

ಅಧ್ಯಕ್ಷರು.—ಈಗ ಗವರ್ನರ ಸೆಳೆಯುವ ಸೂಚನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಟಿ. ಆರ್. ಶಾಮಣ್ಣನವರು ಪೆಟ್ರೋಲ್ ಮೇಲೆ ಕುಳಿತು ಧರಣಿ ಮಾಡುತ್ತಿದ್ದರು. ಅವರು ಕೇಳುತ್ತಿರುವ ಬೇಡಿಕೆ ನ್ಯಾಯವಾದ ಬೇಡಿಕೆಯಾಗಿದೆ.

ಅಧ್ಯಕ್ಷರು.—ತಾವು ಯಾವ ರೂಲ್ಸ್ ಪ್ರಕಾರ ಇದನ್ನು ಕೇಳುತ್ತಿರುವಿರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ಶ್ರೀಯುತ ಶಾಮಣ್ಣನವರು ಹಿರಿಯ ಸದಸ್ಯರು, ಪಯಸ್ಸಾದವರು, ಪಾರ್ಲಿಮೆಂಟ್ ಸದಸ್ಯರಾಗಿದ್ದವರು, ಈಗ ಪ್ರಸ್ತುತ ಎಂ.ಎಲ್.ಸಿ. ಕೂಡ ಆಗಿರುತ್ತಾರೆ. ಅವರು ಕೇಳುತ್ತಿರುವ ಬೇಡಿಕೆ ನ್ಯಾಯಯುತವಾಗಿದೆ...

ಅಧ್ಯಕ್ಷರು.—ಸಂಬಂಧಪಟ್ಟ ಸಚಿವರು ಆಮೇಲೆ ಉತ್ತರವನ್ನು ಕೊಡುತ್ತಾರೆ. ಈಗ ಗವರ್ನರ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಲಾಗುತ್ತದೆ, ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್, ಶ್ರೀ ಪಂಪಾಪತಿ, ಶ್ರೀ ಕೆ. ಬಿ. ಶಾಣಪ್ಪ ಮತ್ತು ಶ್ರೀ ಯು. ಭೂಪತಿಯವರು ಮಾನ್ಯ ಸಚಿವರ ಗಮನ ಸೆಳೆಯಬೇಕೆಂದು ಹೇಳುತ್ತೇನೆ.

ಗಮನ ಸೆಳೆಯುವ ಸೂಚನೆ

ಚಂದ್ರಗುತ್ತಿ ಎಲ್ಲಮ್ಮನ ಜಾತ್ರೆಯಲ್ಲಿ ನಡೆದ ಅನಾಹುತದ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ಎರಡು ವರ್ಷಗಳ ಹಿಂದೆ ಚಂದ್ರಗುತ್ತಿಯಲ್ಲಿ ಎಲ್ಲಮ್ಮನ ಜಾತ್ರೆಯಲ್ಲಿ ನಡೆದ ಅನಾಹುತದ ಬಗ್ಗೆ ಮಾನ್ಯ ಕಂದಾಯ, ಯೋಜನೆ ಮತ್ತು ಕಾರ್ಮಿಕ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡಲು ಅಪೇಕ್ಷೆ ಪಡುತ್ತೇನೆ. ಹೇಳಿಕೆಯು ಕನ್ನಡದಲ್ಲಿ ಮುದ್ರಿತವಾಗಿಲ್ಲ, ದಯವಿಟ್ಟು ಮಾನ್ಯ ಸಭೆಯ ಕ್ಷಮೆಯನ್ನು ಕೇಳಿ ಇಂಗ್ಲೀಷ್‌ನಲ್ಲಿರುವ ಹೇಳಿಕೆಯನ್ನು ಓದುತ್ತೇನೆ.

Sri Renukamba Temple is a major muzrai institution in Chandragutti village, Sorab Taluk. The annuul income of the temple is about 1.62 lakhs. The temple is situated on a small hill-lock. In this temple, 'Bettale Seve" or Nirvana, as a form of seva to the deity Mathungi Devi which is said to be the sister deity of Sree Renukamba, was officially recognised prior to 1866. This was in the list of sevarthas (rites) and a fee of eight annas was prescribed for its performance. The said rite was delted from the list in 1966. However its performance appears to have continued even thereafter during annual Jatra. The Jatra attracts about one lakh devotees from various districts in the State. A category of devotees called "Jogthis" make it a practice to pressurise the devotees who are in grave personal distress to take a vow to perform this ritual. This seems to be the reason for its continuance even after 1966.

In the Jatra of 1986 social service organisations like Dalits Sangarsha Samithi tried to persuade the participants in this rite to desist from performing it. Due to various reasons these attempts were not successful. Government have therefore decided to formally ban this practice throughout the State as it is opposed to contemporary standards of public decency and morality. A decision has also been taken not to hold the forthcoming Jatra in March, 1987 in order to ensure that the enforcement of the said ban on nude worship does not lead to a breach of peace.

ಶ್ರೀ ಎಂ.ಎಸ್. ಕೃಷ್ಣನ್.—ಜಾತ್ರೆಯನ್ನು ಮಾರ್ಚ್ ೧೯೮೭ರಲ್ಲಿ ನಡೆಸುವುದಿಲ್ಲವೆಂದು ಮಾತ್ರ ಹೇಳಿದ್ದೀರಿ. ತಮಗೆ ಗೊತ್ತಿರುವ ಹಾಗೆ ಈ ಮನೆಯಲ್ಲಿ ಅನೇಕ ಸದಸ್ಯರು ಆ ವಿಷಯದ ಬಗ್ಗೆ ಮಾತನಾಡಿದ್ದಾರೆ. ಈಗ ಮತ್ತೆ ಅದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅನಾಗರೀಕ ಅವೈಜ್ಞಾನಿಕ ಮತ್ತು ಮೂಢನಂಬಿಕೆ ಹುಟ್ಟಿಸುವಂಥ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡದೆ ಹೋದರೂ ಅದನ್ನು ತಡೆಗಟ್ಟುವುದರಲ್ಲಿ ವಿಫಲವಾಗಿದೆ ಎಂದು ಹಿಂದೆ ಸಹ ಹೇಳಿದ್ದೇವೆ.

ಶ್ರೀ ಬಿ. ರಾಚಯ್ಯ.—೧೯೬೬ ರಿಂದ ಇದು ನಡೆದುಕೊಂಡು ಬಂದಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಏಕೋ ಇದು ತಮ್ಮ ಕಣ್ಣಿಗೆ ಬೀಳಲಿಲ್ಲವೆಂದು ಕಾಣುತ್ತದೆ. ನಾವು ಅದರ ಬಗ್ಗೆ ಸಾಕಷ್ಟು ಮಾತನಾಡಿದ್ದೇವೆ. ಜಾತ್ರೆಯನ್ನು ಈ ವರ್ಷ ಮಾತ್ರ ನಿಲ್ಲಿಸಿದರೆ ಸಾಲದು. ಆ ಒಂದು ಪದ್ಧತಿ ಏನಿದೆ ಅದು ಮತ್ತು ಜಾತ್ರೆಯನ್ನು ಪೂರ್ತಿಯಾಗಿ ನಿಲ್ಲಿಸುವಂಥ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಈಗ ೧೫ ದಿವಸ ನಿಲ್ಲಿಸುತ್ತೇವೆಂದರೆ ಮತ್ತೆ ಮುಂದೆ ಆಗ ಬಹುದು, ಅದಕ್ಕೆ ಅವಕಾಶ ಕೊಡದೆ ಪೂರ್ತಿಯಾಗಿ ನಿಲ್ಲಿಸಬೇಕು. ಈ ಒಂದು ತೀರ್ಮಾನವನ್ನು ಸರ್ಕಾರ ಕೈಗೊಂಡಿದೆಯೆ ? ಕೈಗೊಂಡಿದ್ದರೆ ಅದನ್ನು ಜಾರಿಗೊಳಿಸುತ್ತೀರಾ ?

ಶ್ರೀ ಪಂಪಾಪತಿ.—ಚಂದ್ರಗುತ್ತಿ ರೇಣುಕಾದೇವಿ ಜಾತ್ರೆ ವಿಚಾರ ಎಲ್ಲರಿಗೂ ಗೊತ್ತಿರತಕ್ಕದ್ದಾಗಿದೆ ಆ ಭಾಗದಲ್ಲಿ ವಿದ್ಯಾರ್ಥಿಗಳೆಲ್ಲರೂ ಪ್ರತಿಭಟನೆ ಮಾಡುತ್ತಿದ್ದಾರೆ. ಸರ್ಕಾರ ಈ ವರ್ಷ ನಿಲ್ಲಿಸುತ್ತೇವೆಂದು ಹೇಳಿದೆ. ಹೀಗೆ ಹೇಳಿಬಿಟ್ಟು ಸುಮ್ಮನಿದ್ದರೆ ಆಗುವುದಿಲ್ಲ. ಹೋದ ಸಾರಿ ಸರಿಯಾದ ವ್ಯವಸ್ಥೆಯನ್ನು ಸರ್ಕಾರ ಮಾಡದೆ ಇದ್ದುದರಿಂದ ಅಲ್ಲಿ ಹೋದ ಸಿಬ್ಬಂದಿ ವರ್ಗದವರು ಬೆತ್ತಲೆ ಆಗಬೇಕಾದ ಪ್ರಸಂಗ ಬಂತು. ಬಿಗಿ ಬಂದೋಬಸ್ತು ಮಾಡಿದರೆ ಮಾತ್ರ ಅದನ್ನು ತಡೆಯುವುದಕ್ಕೆ ಸಾಧ್ಯವೇ ಹೊರತು ಬರೀ ಹೇಳಿಕೆ ಕೊಟ್ಟರೆ ಆಗುವುದಿಲ್ಲ. ಜಾತ್ರೆ ನಿಲ್ಲಿಸುತ್ತೇವೆಂದು ಹೇಳಿದರೆ ಆಗುವುದಿಲ್ಲ. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಬೇಕು. ಹೆಚ್ಚು ಪೋಲೀಸ್ ಸಿಬ್ಬಂದಿಯನ್ನು ಅಲ್ಲಿಗೆ ಕಳುಹಿಸಿ ಜಾತ್ರೆ ನಡೆಯುವುದಕ್ಕೆ ಬಿಡದಂತೆ ಮಾಡಬೇಕು. ಅನೇಕರು ಜಾತ್ರೆ ನಡೆಸಲೇಬೇಕೆಂಬ ತೀರ್ಮಾನ ತೆಗೆದುಕೊಳ್ಳಬಹುದು ಆದರೆ ಆ ಜಾತ್ರೆ ನಡೆಯದಂತೆ ಅದನ್ನು ತಡೆಯುವುದಕ್ಕೆ ಬೇಕಾದ ಸಿಬ್ಬಂದಿ ವರ್ಗವನ್ನು ಆ ಭಾಗದಲ್ಲಿ ವ್ಯವಸ್ಥೆಗೊಳಿಸಿದರೆ ಆ ಜಾತ್ರೆಯನ್ನು ತಡೆಯುವುದಕ್ಕೆ ಸಾಧ್ಯ ಇಲ್ಲದಿದ್ದರೆ ಹೋದವರ್ಷ ಏನು ಅನಾಹುತವಾಯಿತು ಅದಕ್ಕಿಂತ ಹೆಚ್ಚು ಆಗುತ್ತದೆ. ಅದಕ್ಕೆ ಸರ್ಕಾರ ಜವಾಬ್ದಾರಿ ಆಗಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೆಚ್ಚು ಸಿಬ್ಬಂದಿ ವರ್ಗವನ್ನು ಎಂದರೆ ಹೆಚ್ಚುವರಿ ಪೋಲೀಸರನ್ನು ಅಲ್ಲಿಗೆ ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಈ ಅನಾಗರಿಕ ಸೇವೆಯನ್ನು ನಿಲ್ಲಿಸಬೇಕೆಂದು ಕಳೆದಸಾರಿ ಅನೇಕ ಸಂಘ ಸಂಸ್ಥೆಗಳು ಅದರಲ್ಲೂ ಕೂಡ ಮಹಿಳಾ ಸಂಸ್ಥೆಗಳು ದಲಿತ ಸಂಘರ್ಷ ಸಮಿತಿಯವರು ಪ್ರಯತ್ನ ಮಾಡಿದ್ದರು. ಅದಕ್ಕೋಸ್ಕರ ಅಲ್ಲಿ ನಡೆದಂತಹ ಘಟನೆಗಳ ವಿಷಯದಲ್ಲಿ ಚನ್ನವೀರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿ ಅವರು ಏನು ಶಿಫಾರಸ್ಸು ಮಾಡಿದ್ದಾರೆ ಅದನ್ನು ಒಪ್ಪಿ ಸಭೆಯ ಮುಂದಿಟ್ಟಿದ್ದೇನೆ. ಬಹುಶಃ ಅಲ್ಲಿ ನಡೆಯತಕ್ಕ ಜಾತ್ರೆ ಒಂದನ್ನೇ ಪ್ರತ್ಯೇಕವಾಗಿ ನಿಲ್ಲಿಸುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಈ ವರ್ಷದ ಮಟ್ಟಿಗಾದರೂ ಅದನ್ನು ನಿಲ್ಲಿಸಬೇಕಾಗುತ್ತದೆ. ಇಲ್ಲದಿದ್ದರೆ ಲಾ ಆಂಡ್ ಆರ್ಡರ್ ಪಾಲನೆ ಮಾಡುವುದಕ್ಕೆ ಕಷ್ಟವಾಗುತ್ತದೆಂದು ಅಲ್ಲಿನ ಜಿಲ್ಲಾಧಿಕಾರಿಗಳು ಪತ್ರ ಬರೆದಿದ್ದರು. ಅದನ್ನು ಒಪ್ಪಿ ಸೆಕ್ಷನ್ ೩೫೮ ಪ್ರಕಾರ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿ ಜಾತ್ರೆಯನ್ನು ಬ್ಯಾನ್ ಮಾಡುವುದಕ್ಕೆ ಆದೇಶ ನೀಡಿದ್ದೇವೆ. ಅದನ್ನು ಅವರು ಮಾಡುತ್ತಾರೆ. ಇನ್ನು ಪೋಲೀಸ್ ಸಿಬ್ಬಂದಿ ಕಳೆದ ಸಾರಿ ಕಡಿಮೆ ಇತ್ತು, ಈ ಸಾರಿ ಹೆಚ್ಚಿನ ಸಂಖ್ಯೆಯಲ್ಲಿ ಒದಗಿಸಬೇಕೆಂದು ಕೇಳಿದ್ದಾರೆ. ನಾವು ಸಾಕಷ್ಟು ಪೋಲೀಸ್ ಸಿಬ್ಬಂದಿಯನ್ನು ಕಳುಹಿಸಿಕೊಡುತ್ತೇವೆ. ಜೊತೆಗೆ ಸಾರ್ವಜನಿಕರಲ್ಲಿ ಕೇಳುವುದು ಇಷ್ಟೆ. ಸಾರ್ವಜನಿಕರು ಪ್ರತಿಯೊಬ್ಬರೂ ಈ ಸಾಮಾಜಿಕ ಸುಧಾರಣೆ ಆಗಬೇಕಾದ ಪಕ್ಷದಲ್ಲಿ ಸಾಕಷ್ಟು ಮಟ್ಟಿಗೆ ತಿಳಿವಳಿಕೆ ಇಲ್ಲದವರಿಗೆ ತಿಳಿವಳಿಕೆ ನೀಡಿ ವೈಜ್ಞಾನಿಕ ಯುಗದಲ್ಲಿ ಅನಾಗರೀಕ ಸೇವೆ ಸರಿಯಲ್ಲವೆಂದು ಹೇಳಬೇಕಾದುದು ಎಲ್ಲರ ಕರ್ತವ್ಯವಾಗಿದೆ. ಆದ್ದರಿಂದ ಎಲ್ಲರೂ ಸಹಕರಿಸಿದರೆ ಆ ಒಂದು ಪದ್ಧತಿಯನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ ಸರ್ಕಾರ ಮನಸ್ಸು ಮಾಡಿದೆ ಅದಕ್ಕೆ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ. ನಾವು ಸಾಕಷ್ಟು ಸಿಬ್ಬಂದಿಯನ್ನು ಕಳುಹಿಸುತ್ತೇವೆ ಜೊತೆಗೆ ತಾವು ಕೂಡ ದಯವಿಟ್ಟು ಸಹಕರಿಸಬೇಕು, ದಲಿತ ಸಂಘರ್ಷ ಸಮಿತಿ, ಇನ್ನೊಂದು ಹಿಂದೂ ಮಹಾಸಭೆ ಎಂದು ಹೋರಾಡುತ್ತಾರೆ, ಹೀಗಾಗ ಬಾರದು. ಎಲ್ಲರೂ ಮಾನವೀಯತೆಯ ದೃಷ್ಟಿಯಿಂದ ನೋಡಬೇಕು ಹೆಂಗಸರ ಮೇಲೆ ಆಗತಕ್ಕ ಅನ್ಯಾಯಗಳ ಜೊತೆಗೆ ಇದೊಂದು ದೊಡ್ಡ ಅನ್ಯಾಯ. ಆ ದೃಷ್ಟಿಯಿಂದ ಎಲ್ಲರ ಸಹಕಾರವನ್ನು ನಾನು ಕೇಳುತ್ತಿದ್ದೇನೆ. ಸಾಕಷ್ಟು ಪ್ರಮಾಣದಲ್ಲಿ ಅಲ್ಲಿಗೆ ಪೋಲೀಸರನ್ನು ಒದಗಿಸುವುದರ ಜೊತೆಗೆ ಜನರಿಗೆ ತಿಳಿವಳಿಕೆ ಕೊಡುವ ಕರ್ತವ್ಯವನ್ನು ಸಂಘಸಂಸ್ಥೆಗಳು ಮಾಡಬೇಕು. ಅದೇ ರೀತಿ ಮಾನ್ಯ ಶಾಸಕರು ಕೂಡ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.ಈ ಒಂದು ಅನಾಗರೀಕ ಸೇವೆಯನ್ನು ತಪ್ಪಿಸುವುದಕ್ಕೋಸ್ಕರ ಸರ್ಕಾರ ಅದನ್ನು ನಿಷೇಧ ಮಾಡುವುದಕ್ಕೆ ಸೂಕ್ತ ಆಜ್ಞೆಯನ್ನು ಕೊಟ್ಟಿದೆ.

ಶ್ರೀ ಎಂ.ಎಸ್. ಕೃಷ್ಣನ್.— ನಿಷೇಧಾಜ್ಞೆ ಹೊರಡಿಸಿರುವುದು ಈಗಾಗಲೇ ಪತ್ರಿಕೆಯಲ್ಲಿ ಕೂಡ ಬಂದಿದೆ. ತಾವೂ ಅದನ್ನು ನೋಡಿರಬೇಕು. ಪೋಲೀಸ್ ಅಧಿಕಾರಿಗಳು ಏನು ಹೇಳುತ್ತಾರೆಂದರೆ ೧೫ ದಿವಸಕ್ಕೆ ಮಾತ್ರ ನಿಷೇಧ ಮಾಡಬೇಡಿ ಎಂದು ಹೇಳಿದ್ದಾರೆ ಎಂದು ಹೇಳುತ್ತಾರೆ. ೧೫ ದಿವಸ ಆದಮೇಲೆ ಮತ್ತೆ ಮಾಡುವ ಅವಕಾಶ ಆಗಬಹುದು. ಆದ್ದರಿಂದ ನಿಷೇಧಾಜ್ಞೆಯನ್ನು ಪೂರ್ತಿಯಾಗಿ ಜಾತ್ರೆ ನಡೆಯದ ಹಾಗೆ ಮಾಡಬೇಕಾಗುತ್ತದೆ. ಆದನ್ನು ಪೋಲೀಸರು ಮಾಡುವುದಕ್ಕಾಗುವುದಿಲ್ಲ. ಇದನ್ನು ಸರ್ಕಾರ ಮಾಡಬೇಕು. ಈ ತರಹ ನಿರ್ಧಾರಕ್ಕೆ ಸರ್ಕಾರ ಬಂದಿದೆಯೇ ? ಬಂದಿದ್ದರೆ ಅದನ್ನು ಕಾರ್ಯಗತಗೊಳಿಸಲು ಏನು ಮಾಡುತ್ತೀರಿ ?

SRI B. RACHAIAH.—I have already made a statement that the Government have taken a decision to ban the nude worship which has been going on since 1966 in Chandragutti temple. We will take all precautions to ban this nude worship not only in Chandragutti but all over the State in all temples.

SRI M.S. KRISHNAN.—There is already a report which you have just now submitted. In that report there are certain recommendations. Are you going to implement those recommendations ? Apart from that are you taking steps to see that this type of superstition is eliminated in the State ?

SRI B RACHAIAH.—All the recommendations made by the Channaveerappa Commission have been accepted by the Government. We are going to implement whatever recommendations he has made.

MR. SPEAKER.—Next calling attention.

ANNOUNCEMENT

Visit of the Polish Parliamentary Delegation

MR. SPEAKER.—An eleven member Polish Parliamentary Delegation headed by His Excellency Mr. Raman Malinowski, Speaker of Parliament, Poland, is in the Speaker's gallery. On behalf of the Members of the House and on my own behalf I extend to the Members of the Delegation a cordial welcome.

The delegation which arrived in Bangalore on 28th February visited a few of the Public Sector Undertakings and places of tourist importance in Bangalore. The Delegation visited Mysore yesterday The delegation will be leaving for Delhi today afternoon.

I hope the Delegation enjoyed the brief sojourn in Karnataka.

(ii) ಆಳಂದ ನಗರದಲ್ಲಿ ಉಂಟಾಗಿರಂವ ಕುಡಿಯುಂವ ನೀರಿನ ಸವಂಸ್ಯೆ.

ಶ್ರೀ ಶರಣ ಬಸಪ್ಪ ಮಾಲಿ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಆಳಂದ ನಗರದಲ್ಲಿ ಉಂಟಾಗಿರುವ ಕುಡಿಯಂವ ನೀರಿನ ತೀವ್ರ ಸಮಸ್ಯೆ ಬಗ್ಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಹಾಗೂ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯಂತ್ತೀನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—

ದಿನಾಂಕ ೮-೮-೧೯೮೬ ರಂದು ಗುಲ್ಬರ್ಗ ನಗರದಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ ಮಾನ್ಯ ಮುಖ್ಯ ಮಂತ್ರಿಗಳು ಆಳಂದ ಪಟ್ಟಣಕ್ಕೆ ಹೊನ್ನಳ್ಳಿ ಕೆರೆಯಿಂದ ಕುಡಿಯುಂವ ನೀರು ಸರಬರಾಜು ಯೋಜನೆಯನ್ನು ತೀವ್ರವಾಗಿ ಕೈಗೆತ್ತಿಕೊಂಡು ಬೇಗ ಕೆಲಸ ನಿರ್ವಹಿಸಬೇಕೆಂದು ಆದೇಶ ನೀಡಿರುತ್ತಾರೆ. ಆ ಪ್ರಕಾರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಂ